ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ನಂ.17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ ಬೆಂಗಳೂರು 560 001. ದೂ. 080–22028032/34/ಫ್ಯಾಕ್ಸ್ 22028041

ದಿನಾಂಕ : 25–02–2015

# ಪತ್ರಿಕಾ ಪ್ರಕಟಣೆ

## ಲಿಖಿತ ಪರೀಕ್ಷೆಗೆ ಅನುವು : ಸ್ಪಷ್ಟೀಕರಣ

**ಬೆಂಗಳೂರು, ಫೆಬ್ರವರಿ 25 (ಕರ್ನಾಟಕ ವಾರ್ತೆ)**

ಪೊಲೀಸ್ ಸಬ್–ಇನ್ಸ್‌ಪೆಕ್ಟರ್ (ಸಿವಿಲ್) ಮತ್ತು ಸಶಸ್ತ್ರ ಮೀಸಲು ಸಬ್–ಇನ್ಸ್‌ಪೆಕ್ಟರ್ (ಸಿಎಆರ್/ಡಿಎಆರ್) ಹುದ್ದೆಗಳಲ್ಲಿನ ಒಟ್ಟು 285 ಖಾಲಿ ಹುದ್ದೆಗಳ ನೇಮಕಾತಿ ಸಲುವಾಗಿ ಲಿಖಿತ ಪರೀಕ್ಷೆಯನ್ನು ದಿನಾಂಕ 11–1–2015 ರಂದು ನಡೆಸಲಾಗಿರುತ್ತದೆ. ಲಿಖಿತ ಪರೀಕ್ಷೆಯ ಸಂಬಂಧ ಬೆಂಗಳೂರು ವಿಭಾಗಕ್ಕೆ ನೊಂದಣಿ ಸಂಖ್ಯೆ 5529001 ರಿಂದ 5540819 ರ ವರೆಗೆ ವಿತರಣೆ ಮಾಡಿದ್ದಲ್ಲದೇ, ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಿಂದ ಅರ್ಜಿ ಸಂಖ್ಯೆ: 9132/2014 ರಲ್ಲಿ ಪಡೆದ ಮಧ್ಯಂತರ ಆದೇಶದ ಮೇರೆಗೆ ನೋಂದಣಿ ಸಂಖ್ಯೆ 5540820 ನ್ನು ನೀಡಲಾಗಿರುತ್ತದೆ. ತದನಂತರ ಇಬ್ಬರು ಅಭ್ಯರ್ಥಿಗಳು ಪಿಎಸ್ಐ/ಆರಸ್‌ಎಸ್ಐ ಹುದ್ದೆಯ ಆಯ್ಕೆ ಸಲುವಾಗಿ ಅರ್ಜಿ ಸಂಖ್ಯೆ 2745617 ಮತ್ತು 27485345 ನ್ನು ಸಲ್ಲಿಸಿದ್ದು, ಅದರನುಸಾರ ಅವರುಗಳಿಗೆ ಸಹಿಷ್ಣುತೆ ಮತ್ತು ದೇಹದಾರ್ಢ್ಯತೆ ಪರೀಕ್ಷೆಗಳಿಗೆ ಅನುವು ಮಾಡಲಾಗಿರುತ್ತದೆ. ಸದರಿ ಪರೀಕ್ಷೆಗಳಲ್ಲಿ ಅವರುಗಳು ಅರ್ಹಗೊಂಡಿದ್ದು, ಅವರುಗಳು ಲಿಖಿತ ಪರೀಕ್ಷೆಯ ಕರೆ ಪತ್ರವನ್ನು ಪಡೆದಿರುವುದಿಲ್ಲ. ಮೇಲಿನ ಅಭ್ಯರ್ಥಿಗಳು ತಾವು ಸಹಿಷ್ಣುತೆ ಮತ್ತು ದೇಹದಾರ್ಢ್ಯತೆ ಪರೀಕ್ಷೆಯಲ್ಲಿ ಅರ್ಹರಾಗಿರುವುದಾಗಿ ತಿಳಿಸಿ ಸಹಿಷ್ಣುತೆ ಮತ್ತು ದೇಹದಾರ್ಢ್ಯತೆ ಪರೀಕ್ಷೆ ಸಮಿತಿಯ ಅಧ್ಯಕ್ಷರು ನೀಡಿದ ಫಲಿತಾಂಶ ಹಾಳೆಯನ್ನು ತೋರಿಸಿದ ನಂತರ, ನೇಮಕಾತಿ ವಿಭಾಗವು ಮಾಹಿತಿಯನ್ನು ಖಚಿತಪಡಿಸಿಕೊಂಡು ಮೇಲಿನ ಅಭ್ಯರ್ಥಿಗಳಿಗೆ ನೊಂದಣಿ ಸಂಖ್ಯೆ 5540821 ಮತ್ತು 5540822 ಗಳನ್ನು ಕ್ರಮಬದ್ಧವಾಗಿ ನೀಡಿ ಲಿಖಿತ ಪರೀಕ್ಷೆಗೆ ಅನುವು ಮಾಡಲಾಗಿರುತ್ತದೆ.

ಅಭ್ಯರ್ಥಿಗಳು ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದ ಹಾಗೂ ಕೋರಿದ ಮೀಸಲಾತಿಗಳನುಸಾರ ಮೌಖಿಕ ಪರೀಕ್ಷೆಗೆ 1:2 ಪ್ರಮಾಣದಲ್ಲಿ ಕರೆದಿದ್ದು, ಯಾವ ಸಂಶಯಕ್ಕೆ ಅವಕಾಶವಿಲ್ಲ ಎಂದು ಸ್ಪಷ್ಟೀಕರಣ ನೀಡಲಾಗಿದೆ.

ಬಾಬು:ಜಿಪಿಆರ್.

## ಮಾಧ್ಯಮಗಳು ಅಭಿವೃದ್ಧಿ ವಿಷಯಕ್ಕೆ ಆದ್ಯತೆ ನೀಡಲಿ

– ಡಾ ನಾಗಾಂಬಿಕಾದೇವಿ

**ಬೆಂಗಳೂರು, ಫೆಬ್ರವರಿ 25 (ಕರ್ನಾಟಕ ವಾರ್ತೆ)**

ಅತಿತಂಜಿತ ಸುದ್ದಿಗಳಿಗಿಂತ ಜನರಲ್ಲಿ ಜಾಗೃತಿ ಮೂಡಿಸುವಂತ, ಅಭಿವೃದ್ಧಿ ವಿಷಯಗಳತ್ತ ಮಾಧ್ಯಮಗಳು ಆದ್ಯತೆ ನೀಡಬೇಕು ಎಂದು ವಾರ್ತಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ. ನಾಗಾಂಬಿಕಾದೇವಿ ಅವರು ತಿಳಿಸಿದರು.

ಕರ್ನಾಟಕ ಮಾಧ್ಯಮ ಅಕಾಡೆಮಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಭಾರತೀಯ ಸಾರ್ವಜನಿಕ ಸಂಪರ್ಕ ಮಂಡಳಿ ಹಾಗೂ ಯಂಗ್ ಕಮ್ಯುನಿಕೇಟರ್ಸ್ ಕ್ಲಬ್ ಸಂಯುಕ್ತವಾಗಿ ವಿಶ್ವ ಬಾನುಲಿ ದಿನಾಚರಣೆ ಅಂಗವಾಗಿ ಇಂದು ಬೆಂಗಳೂರಿನಲ್ಲಿ ಏರ್ಪಡಿಸಿದ್ದ ಬಾನುಲಿ ಕಾರ್ಯಕ್ರಮ ನಿರ್ಮಾಣ ಕಾರ್ಯಾಗಾರವನ್ನು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು ಸಮಾಜದ ಕಟ್ಟಕಡೆಯ ವ್ಯಕ್ತಿಗೂ ತಲುಪುವ ಏಕೈಕ ಮಾಧ್ಯಮ ರೇಡಿಯೋ ಮಾಧ್ಯಮ.

ಮಾಧ್ಯಮಗಳ ಮೂಲಕ ಸಮಾಜದ ಹಾಗೂ ದೇಶದ ಅಭಿವೃದ್ಧಿ ಸಾಧ್ಯವಿದೆ. ಇಂದಿನ ಯುವ ಪೀಳಿಗೆ ಅದರಲ್ಲೂ ಮಾಧ್ಯಮ ವಿಷಯಗಳಲ್ಲಿ ಅಭ್ಯಾಸ ಮಾಡುತ್ತಿರುವವರು ಮಾಧ್ಯಮಗಳ ಬಗ್ಗೆ ಆಳವಾದ ಅಭ್ಯಾಸ ಮಾಡುವುದರ ಜೊತೆಗೆ ತಮ್ಮನ್ನು ಸಂಶೋಧನೆಗಳಲ್ಲಿ ತೊಡಗಿಸಿಕೊಂಡು ವಸ್ತುಸ್ಥಿತಿಯನ್ನು ಸಮಾಜಕ್ಕೆ ತಿಳಿಸಬೇಕು ಎಂದರು.

ಅವಕಾಶ ವಂಚಿತ ಜನರಲ್ಲಿ ಅರಿವು ಮೂಡಿಸುವಂತ ಕೆಲಸಗಳನ್ನು ಮಾಧ್ಯಮಗಳು ಮಾಡಬೇಕಾಗಿದೆ ಎಂದ ಅವರು ವಾರ್ತಾ ಇಲಾಖೆಗೆ ಆದ್ಯತೆ ನೀಡಿ ಅನುದಾನವನ್ನು ಬಿಡುಗಡೆ ಮಾಡುತ್ತಿದ್ದು, ಇಲಾಖೆ ಕೂಡ ಸಮರ್ಪಕವಾಗಿ ಕೆಲಸಮಾಡುತ್ತಿದೆ ಎಂದ ಡಾ. ನಾಗಾಂಬಿಕಾದೇವಿ ಅವರು ಇಂದಿನ ಕಾರ್ಯಕ್ರಮ ಸಕಾರಾತ್ಮಕ ಕಾರ್ಯಕ್ರಮವಾಗಿದ್ದು ಯುವಜನಾಂಗ ಮಾಧ್ಯಮ ಕ್ಷೇತ್ರಗಳತ್ತ ಹೆಚ್ಚು ಒಲವು ಹೊಂದಬೇಕಾಗಿದೆ ಎಂದು ತಿಳಿಸಿದರು.

ದೃಶ್ಯ ಹಾಗೂ ಮುದ್ರಣ ಮಾಧ್ಯಮ ಪ್ರಬಲವಾಗಿ ಬೆಳೆಯುತ್ತಿದ್ದರೂ ಶ್ರವಣ ಮಾಧ್ಯಮ ತನ್ನ ಆಸ್ತಿತ್ವವನ್ನು ಉಳಿಸಿಕೊಂಡಿದೆ ಎಂದು ಆಕಾಶವಾಣಿ ನಿವೃತ್ತ ಕಾರ್ಯಕ್ರಮ ನಿರ್ವಾಹಕರಾದ ಶ್ರೀಮತಿ ನಾಗಮಣಿ ಎಸ್. ರಾವ್ ಅವರು ಆಕಾಶವಾಣಿ ಕಾರ್ಯಕ್ರಮಗಳಲ್ಲಿ ಹೊಣೆಗಾರಿಕೆ ಮತ್ತು ಕಳಕಳಿಯನ್ನು ಕಾಣಬಹುದಾಗಿದೆ ಎಂದರು.

ರೇಡಿಯೋ ಪ್ರತಿಯೊಬ್ಬರ ಜೀವನದಲ್ಲಿ ಅತಿ ಹತ್ತಿರವಾದ ಮಾಧ್ಯಮವಾಗಿದೆ ಎಂದು ಚಲನಚಿತ್ರ ಅಕಾಡೆಮಿಯ ಅಧ್ಯಕ್ಷ ಶ್ರೀ ರಾಜೇಂದ್ರಸಿಂಗ್ ಬಾಬು ಅವರು ಇದೇ ಸಂದರ್ಭದಲ್ಲಿ ತಿಳಿಸಿದರು.

ಆಕಾಶವಾಣಿ ಮನುಕುಲದ ಬೃಹತ್ ಪರಿಣಾಮಕಾರಿ ಶಕ್ತಿ ಚಲನಚಿತ್ರ, ಟಿ.ವಿ. ಮಾಧ್ಯಮಗಳಷ್ಟೇ ಪ್ರಭಾವಶಾಲಿ ಮಾಧ್ಯಮ ಎಂದು ಸಮಾರಂಭದ ಅಧ್ಯಕ್ಷತೆವಹಿಸಿ ಮಾತನಾಡಿದ ಮಾಧ್ಯಮ ಅಕಾಡೆಮಿ ಅಧ್ಯಕ್ಷ ಶ್ರೀ ಪೊನ್ನಪ್ಪ ಅವರು ಸಮುದಾಯ ಬಾನುಲಿ ಕೇಂದ್ರಗಳು ಹೆಚ್ಚುತ್ತಿರುವುದು ಅದರ ಪ್ರಾಮುಖ್ಯತೆಯನ್ನು ನಮಗೆ ತೋರಿಸುತ್ತದೆ ಎಂದರು.

ರೇಡಿಯೋ ಅತಿವೇಗದಲ್ಲಿ ತಲುಪುತ್ತಿರುವ ಏಕೈಕ ಮಾಧ್ಯಮ. ಅಂದು ನಾಗಲೋಟದಲ್ಲಿ ಮುನ್ನಡೆಯುತ್ತಿದೆ ಎಂದು ಭಾರತೀಯ ಸಾರ್ವಜನಿಕ ಸಂಪರ್ಕ ಮಂಡಳಿಯ ಅಧ್ಯಕ್ಷ ಡಾ. ಬಿ.ಕೆ. ರವಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕ ಶ್ರೀ ಎನ್. ಆರ್. ವಿಶುಕುಮಾರ್, ಶ್ರೀ ಎನ್.ಡಿ. ಜಯರಾಂ, ಡಾ. ಕೆ. ವೇಣುಗೋಪಾಲ್, ಶ್ರೀಮತಿ ಗೀತಾಶಂಕರ್, ಮಾಧ್ಯಮ ಅಕಾಡೆಮಿ ಸದಸ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಬಾಬು:ಕೆಪಿಪಿ:ಜಿಪಿಆರ್.